SRUJANI
ISSN: 2583-3510
Indian Journal of Innovative Research and Development (SIJIRD)
Volume-1 (02), May-June 2022, Pp. 55-59
Bi-Monthly, Peer-Reviewed, Open Access, Indexed Journal
editor@srujani.in
www.srujani.in

# ಬೆಟ್ಟ ಕುರುಬ ಸಮುದಾಯದ ಸಾಂಸ್ಕೃತಿಕ ಪರಂಪರೆ

**ಯೋಗೇಶ ಸಿ ಎಂ***
*ಸಂಶೋಧನಾ ವಿದ್ಯಾರ್ಥಿ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

***Abstract:***
ಯಾವುದೇ ಒಂದು ರಾಷ್ಟ್ರ ಅಥವಾ ಜನಾಂಗದ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ ಜೀವನ ಸ್ಥಿರವಾಗಿರದೆ ಕಾಲದಿಂದ ಕಾಲಕ್ಕೆ, ಸ್ಥಳದಿಂದ ಸ್ಥಳಕ್ಕೆ ಬದಲಾಗುತ್ತಿರುತ್ತದೆ. ಬದಲಾವಣೆ ಎಂಬುದು ನಿಸರ್ಗದ ನಿಯಮ, ಪ್ರತಿಯೊಬ್ಬ ವ್ಯಕ್ತಿ ಸಮುದಾಯ ಅಥವಾ ಜನಾಂಗ ಪುರಾತನ ಕಾಲದಿಂದಲೂ ಬದಲಾವಣೆಗೆ ಹೊಂದಿಕೊಳ್ಳುತ್ತಾ ಬಂದಿದ್ದಾನೆ. ಬದಲಾವಣೆಗೆ ಒಗ್ಗದ ವ್ಯಕ್ತಿ ಅಥವಾ ಸಮುದಾಯ ಅಥವಾ ಸಮಾಜ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವುದು ಕಷ್ಟವಾಗುತ್ತದೆ. ಪ್ರಸ್ತುತ ಲೇಖನದಲ್ಲಿ ಬೆಟ್ಟಕುರುಬ ಸಮುದಾಯದ ಸಾಂಸ್ಕೃತಿಕ ಪರಂಪರೆ ಮತ್ತು ಬದಲಾವಣೆಗಳನ್ನು ವಿವರಿಸಲಾಗಿದೆ.

***Key Words:*** ಬೆಟ್ಟಕುರುಬ, ಬುಡಕಟ್ಟು, ಸಾಂಸ್ಕೃತಿಕ ಪರಂಪರೆ, ಬದಲಾವಣೆ.

**ಪೀಠಿಕೆ**

ಬೆಟ್ಟಕುರುಬ ಬುಡಕಟ್ಟು ಸಮುದಾಯವು ಕರ್ನಾಟಕದ ಪ್ರಮುಖ ಅರಣ್ಯವಾಸಿ ಬುಡಕಟ್ಟುಗಳಲ್ಲಿ ಒಂದಾಗಿದ್ದು, ಇವರು ಕರ್ನಾಟಕ, ತಮಿಳುನಾಡು ಮತ್ತು ಕೇರಳ ರಾಜ್ಯಗಳ ಗಡಿ ಭಾಗಗಳಲ್ಲಿ ಕಂಡು ವಾಸಿಸುತ್ತಾರೆ. ಬೆಟ್ಟಕುರುಬರನ್ನು ಸರ್ಕಾರವು ಅಧಿಕೃತವಾಗಿ ಕಾಡುಕುರುಬ ಎಂದೂ ನಮೂದಿಸಿದೆ. ಇದು ಹಲವಾರು ಗೊಂದಲಗಳಿಗೂ ಕೂಡ ಕಾರಣವಾಗಿದೆ. 2011ನೇ ಜನಗಣತಿ ಪ್ರಕಾರ ರಾಜ್ಯದಲ್ಲಿ ಇವರ ಜನಸಂಖ್ಯೆ 5,984 ಪುರುಷ ಮತ್ತು 5969 ಮಹಿಳೆಯರನ್ನೊಳಗೊಂಡಂತೆ ಒಟ್ಟು 11,953 ರಷ್ಟಿದೆ. 2001ನೇ ಜನಗಣತಿಗೆ ಹೋಲಿಸಿದಾಗ 17,112 ರಷ್ಟಿದ್ದ ಇವರ ಪ್ರಮಾಣ, ಕರ್ನಾಟಕದ ಮೂಲನಿವಾಸಿ ಬುಡಕಟ್ಟು ಪಟ್ಟಿಯಲ್ಲಿರುವ ಜೇನುಕುರುಬ ಮತ್ತು ಕೊರಗ ಸಮುದಾಯಕ್ಕಿಂತಲೂ ಕಡಿಮೆಯಿದೆ. ಬೆಟ್ಟಕುರುಬರು ವಾಸ ಮಾಡುವ ಸ್ಥಳಗಳಿಗೆ ಹಾಡಿ, ಪೋಡು ಅಥವಾ ಕಾಲೋನಿಗಳು ಎಂದು ಕರೆಯುತ್ತಾರೆ. ಪೂರ್ವದಲ್ಲಿ ಪುಟ್ಟ ಗುಡಿಸಲುಗಳನ್ನು ನಿರ್ಮಿಸಿಕೊಂಡು ವಾಸಿಸುತ್ತಿದ್ದ ಈ ಸಮುದಾಯದವರಿಗೆ ಸರ್ಕಾರದಿಂದ ಹೆಂಚಿನ ಮನೆಗಳನ್ನು ಹಾಗೂ ಶೀಟಿನ ಮನೆಗಳನ್ನು ನಿರ್ಮಿಸಿ ಕೊಟ್ಟಿದ್ದಾರೆ ಆದರೆ ಗುಣಮಟ್ಟದ ಕೊರತೆಯಿಂದ ಇಂದಿಗೂ ಅನೇಕ ಕುಟುಂಬಗಳು ಗುಡಿಸಿಲಿನಲ್ಲಿಯೇ ವಾಸಿಸುತ್ತಿರುವುದನ್ನು ಕಾಣಬಹುದಾಗಿದೆ. (ಮಂಜುನಾಥ ಮತ್ತು ಇತರರು, 2019)

ಬೆಟ್ಟಕುರುಬರು ತಮ್ಮದೇಯಾದ ಭಾಷೆ ಬಳಸುತ್ತಾರೆ. ಹೊರಗಿನವರೊಂದಿಗೆ ವ್ಯವಹರಿಸುವಾಗ ಕನ್ನಡ, ತಮಿಳು ಮತ್ತು ಮಲಯಾಳಿ ಭಾಷೆಯನ್ನು ಮಾತನಾಡುತ್ತಾರೆ. ಇವರು ಕಾಡುಪ್ರಾಣಿಗಳ ಅದರಲ್ಲೂ ಆನೆಯ ಸ್ವಭಾವ ಮತ್ತು ವರ್ತನೆಗಳ ಬಗ್ಗೆ ಹೆಚ್ಚಿನ ತಿಳುವಳಿಕೆವುಳ್ಳವರಾಗಿದ್ದಾರೆ. ಹಾಗಾಗಿ ಅರಣ್ಯ ಇಲಾಖೆಯವರು ಆನೆಗಳನ್ನು ಸಾಕುವ ಮತ್ತು ಅವುಗಳನ್ನು ಪಳಗಿಸಿ ತರಬೇತಿಗೊಳಿಸುವ ಕೆಲಸಗಳಿಗೆ ಇವರನ್ನು ನೇಮಿಸಿಕೊಳ್ಳುತ್ತಾರೆ. ಕಾಡಿನಲ್ಲಿ ಸಿಗುವ ಕಿರು ಅರಣ್ಯೋತ್ಪನ್ನಗಳ ಸಂಗ್ರಹ ಇವರ ಮುಖ್ಯ ವೃತ್ತಿಯಾಗಿದೆ. ಸಣ್ಣ ತುಂಡು ಜಮೀನುಗಳಲ್ಲಿ ತರಕಾರಿ ಬೆಳೆದುಕೊಳ್ಳುತ್ತಾರೆ. ಇವರ ಕೃಷಿ ಭೂಮಿಯ ಸುತ್ತಲು ಕಾಫಿ ತೋಟಗಳು ಸುತ್ತುವರೆದ ಕಾರಣ ಕೂಲಿಗಳಾಗಿ ದುಡಿಯುತ್ತಾರೆ.

ಬೆಟ್ಟಕುರುಬ ಸಮುದಾಯದಲ್ಲಿ ಲಿಂಗತಾರತಮ್ಯ ಇಲ್ಲ. ವಿಭಕ್ತ ಕುಟುಂಬಗಳೇ ಹೆಚ್ಚಾಗಿವೆ. ಮದುವೆಯ ನಂತರ ಪ್ರತ್ಯೇಕವಾಗಿ ಬದುಕುವುದು ಈ ಸಮುದಾಯದ ಅಲಿಖಿತ

*Please cite this article as:* ಯೋಗೇಶ ಸಿ ಎಂ. (2022). ಬೆಟ್ಟ ಕುರುಬ ಸಮುದಾಯದ ಸಾಂಸ್ಕೃತಿಕ ಪರಂಪರೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 1(2), 55–59.

ನಿಯಮವಾಗಿಬಿಟ್ಟಿದೆ. ಸಾಮುದಾಯಿಕ ಬದುಕಿಗೆ ಇಲ್ಲಿ ಹೆಚ್ಚಿನ ಪ್ರಾಶಸ್ತ್ಯ. ಇವರು ಹಾಡಿಗಳನ್ನು ಕಟ್ಟುವಾಗಲೂ ಸಹ ಸಾಮುದಾಯಿಕ ಆಶಯಗಳಿಗೆ ದಕ್ಕೆಯಾಗದಂತೆ ನೋಡಿ ಕೋಳ್ಳುತ್ತಾರೆ. ಜೇನುಕುರುಬರ ಹಾಡಿಗಳು ವೃತ್ತಾಕಾರದಲ್ಲಿದ್ದರೆ, ಬೆಟ್ಟಕುರುಬರ ಹಾಡಿಗಳು ಚೌಕಾಕಾರದಲ್ಲಿ ರೂಪಿಸಲ್ಪಡುತ್ತವೆ. ಚೌಕಾಕಾರದ ಹಾಡಿಗಳ ಮಧ್ಯೆ 'ಅಂಬಾಲ' ವನ್ನು ಕಟ್ಟುತ್ತಾರೆ. ಈ 'ಅಂಬಾಲ' ಸಮುದಾಯದ ಆರಾಧನಾ ಕೇಂದ್ರ. ಎಲ್ಲರ ಗುಡಿಸಲು ಭಾಗಿಲುಗಳು ಈ ಅಂಬಾಲಕ್ಕೆ ಅಭಿಮುಖವಾಗಿರುತ್ತವೆ. ಸಮುದಾಯದ ಎಲ್ಲ ಆಧ್ಯಾತ್ಮಿಕ ಚಟುವಟಿಕೆಗಳು, ದೈವಾರಾಧನೆ ಈ 'ಅಂಬಾಲ' ದಲ್ಲಿಯೇ ನಡೆಯುತ್ತವೆ. 'ಅಂಬಾಲ' ಒಂದು ಅರ್ಥದಲ್ಲಿ ಬೆಟ್ಟಕುರುಬದ ಸಮಷ್ಟಿತನದ ಸಾಕ್ಷಿಪ್ರಜ್ಞೆ, ನ್ಯಾಯಪದ್ಧತಿ ಬೆಟ್ಟಕುರುಬರಲ್ಲಿ ಇನ್ನೂ ಪ್ರಚಲಿತದಲ್ಲಿದ್ದು, ಹಲವು ಸಂಘರ್ಷ ಮತ್ತು ವಿವಾದಗಳು ಹಾಡಿಯ ನ್ಯಾಯದಲ್ಲಿಯೇ ಬಗೆ ಹರಿಯುತ್ತವೆ. ಹಾಡಿಯನ್ನು ಮೀರಿದಾಗ ಕುಲಪಂಚಾಯಿತಿಗೆ ವಿವಾದಗಳು ಒಯ್ಯಲ್ಪಡುತ್ತವೆ. ಹಾಡಿ ನ್ಯಾಯವು ಬೆಟ್ಟಕುರುಬರ ಸಾಮುದಾಯಿಕ ಬದುಕನ್ನು ವಿಘಟನೆಗೆ ಒಯ್ಯದಂತೆ ಕಾಪಾಡುತ್ತಿದೆ. ಋತುಮತಿ, ಬಾಣಂತನ, ಸಾವು ಇತ್ಯಾದಿಗಳಲ್ಲಿ ಇವರು ಕಟ್ಟುನಿಟ್ಟಿನ ಸೂತಕವನ್ನು ಆಚರಿಸುತ್ತಾರೆ. ಕಾಡಿನಿಂದ ಒಕ್ಕಲೆದ್ದು ಕಾಡಂಚಿಗೆ ಬಂದು ನೆಲೆನಿಂತರೂ ಸಹ ಸಾಮುದಾಯಿಕ ಆಶಯಗಳಿಗೆ ಧಕ್ಕೆಯಾಗಿಲ್ಲ. ಆದರೆ ತೀವ್ರ ಬಡತನ ಬಡಟ್ಟಕುರುಬರನ್ನು ಇನ್ನಿಲ್ಲದಂತೆ ಕಾಡುತ್ತಿದೆ. ಸ್ಥಳಾಂತರದ ಪರಿಣಾಮಗಳು ಕಳೆದ 40 ವರ್ಷಗಳಲ್ಲಿ ಬೆಟ್ಟಕುರುಬರನ್ನು ಹೈರಾಣಾಗಿಸಿವೆ. ಆದರೆ ಇವರ ಆಚರಣೆಗಳು ಸಂಘಟಿತ ಜೀವನ ಕ್ರಮವನ್ನು ಇನ್ನೂ ರಕ್ಷಿಸಿಕೊಳ್ಳಲು ಸಹಕಾರಿಯಾಗಿವೆ. ಬೆಟ್ಟಕುರುಬರ ಸೃಷ್ಟಿಪುರಾಣದಲ್ಲಿಯೇ ಇರುವಂತೆ ಬೆಟ್ಟಕುರುಬರು ಬಿದಿರನ್ನು ಬಳಸಿ ಪರಿಕರಗಳನ್ನು ತಯಾರಿಸುತ್ತ ತಮ್ಮ ಜೀವನ ನಿರ್ವಹಣೆ ಮಾಡುತ್ತಾ ಬಂದಿದ್ದಾರೆ. ಬುಟ್ಟಿ, ಮೊರ, ಕುಕ್ಕೆ, ತೊಟ್ಟಿಲು ಮತ್ತು ಕೃಷಿ ಉಪಯೋಗಿ ಉಪಕರಣಗಳನ್ನು ತಯಾರಿಸುತ್ತಾರೆ. ಜೊತೆಗೆ ಕಾಡಿನಿಂದ ಸ್ಥಳಾಂತರಗೊಂಡ ನಂತರ ಸಿಕ್ಕ ಚಿಕ್ಕ ಭೂಮಿಯಲ್ಲಿ ವ್ಯವಸಾಯವನ್ನೂ ಮಾಡುತ್ತಿದ್ದಾರೆ. ಆದರೆ ಈ ಕೃಷಿಯು ಬಡಟ್ಟಕುರುಬರ ಜೀವನ ನಿರ್ವಹಣೆಗೆ ಹೆಚ್ಚು ಸಹಕಾರಿಯಾಗಿಲ್ಲ. ಜೇನುಕುರುಬರಂತೆಯೇ ಬೆಟ್ಟಕುರುಬರೂ ಹೆಚ್ಚಾಗಿ ಅವಲಂಬಿಸಿರುವುದು ಕೃಷಿ ಕೂಲಿಯನ್ನು ಅದರಲ್ಲೂ ಸಮೀಪದ ಎಸ್ಟೇಟುಗಳಿಗೆ ಮತ್ತು ರಬ್ಬರ್ ತೋಟಗಳಿಗೆ ಬೆಟ್ಟಕುರುಬರು ದಿನಗೂಲಿ ಆಧಾರದಲ್ಲಿ ಕೆಲಸಕ್ಕೆ ಹೋಗುತ್ತಿದ್ದಾರೆ. ಇದರ ಜೊತೆ ಅರಣ್ಯ ಇಲಾಖೆಯ ದೈಹಿಕಶ್ರಮ ಆಧಾರಿತ ಕೆಲಸಗಳಲ್ಲಿ ಬೆಟ್ಟಕುರುಬರು ತೊಡಗಿಕೊಂಡಿದ್ದಾರೆ. ಅರಣ್ಯಕ್ಕೆ ಬೆಂಕಿ ಬಿದ್ದಾಗ ಆರಣ್ಯ ಇಲಾಖೆಯ ಜೊತೆ ಸೇರಿ ಜೀವದ ಹಂಗು ತೊರೆದು ಬೆಂಕಿ ನಂದಿಸುವ ಕೆಲಸ ಇವರದು. ಅರಣ್ಯದ ಕುರುತು ಅಗಾಧ ತಿಳುವಳಿಕೆ ಇತ್ತು ಇವರನ್ನು ಅನೇಕ ರೀತಿಯಲ್ಲಿ ಬಳಸಿಕೊಳ್ಳಬಹುದಿತ್ತು. ಅರಣ್ಯದಿಂದ ಒಕ್ಕಲೆಬ್ಬಿಸಿದ ನಂತರ ಇವರನ್ನು ಕೂಲಿಗಳಂತೆ ನೋಡಿದ್ದೆ ಹೆಚ್ಚಾಗಿತ್ತು. ಅರಣ್ಯ ಇಲಾಖೆಯಲ್ಲಿ ಕಾಡಿನಲ್ಲಿ ಕೂಲಿ ಕೆಲಸ ನಿರ್ವಹಿಸುತ್ತಾ ಅರಣ್ಯದ ಜೊತೆ ನಂಟನ್ನು ಹೊಂದಿದ್ದಾರೆ. ಇತ್ತಿಚಿಗೆ ಅರಣ್ಯ ಕಾಯ್ದೆಯ ಕಟ್ಟುನಿಟ್ಟಿನ ಕ್ರಮದಿಂದಾಗಿ ಬಿದಿರು ಸಿಗದೆ ಅವರ ಪಾರಂಪರಿಕ ಕಸುಬಾದ ಬುಟ್ಟಿ ಹೆಣೆಯುವುದು ಅವಸಾನದ ಅಂಚಿನಲ್ಲಿದೆ. ಜೊತೆಗೆ ಕಾಡಿನಿಂದ ಸ್ಥಳಾಂತರಗೊಂಡ ಮೇಲೆ ಸರಿಯಾದ ಪುನರ್ವಸತಿ ಲಭ್ಯವಾಗದೆ ಆರ್ಥಿಕವಾಗಿ ತೀರ ಹಿಂದುಳಿದಿದ್ದಾರೆ. ಇದರ ಜೊತೆಗೆ ಕೇರಳ ರಾಜ್ಯಕ್ಕೆ ಇವರು ದೊಡ್ಡಮಟ್ಟದಲ್ಲಿಯೇ ವಲಸೆ ಹೋಗಲು ಕಾರಣ ಜೀವನ ನಿರ್ವಹಣೆಗಾಗಿಯೇ ಎಂಬುದು ಗಮನಾರ್ಹ ವಿಷಯವಾಗಿದೆ. ಇವರು ಶತಮಾನಗಳ ಕಾಲದ ಅರಣ್ಯದ ಜೊತೆಗಿನ ಸಂಬಂಧದಿಂದ ಈ ಸಮುದಾಯಕ್ಕೆ ಒಂದು ಮಾನವೀಯ ಅಂತಃಕರಣ ಪ್ರಾಪ್ತವಾಗಿದೆ. ಮತಧರ್ಮಗಳ ಯಾವ ಹಂಗು ಇಲ್ಲದೆ ಈ ಸಮುದಾಯದಲ್ಲಿ ಮನುಷ್ಯ ಪ್ರೀತಿ ಪ್ರೇಮಕ್ಕೆ ಅತ್ಯಂತ ಪ್ರಾಮುಖ್ಯತೆ ಇದೆ. ಈ ಕಾರನಕ್ಕಾಗಿಯೇ ಇವರಲ್ಲಿ ಪ್ರೀತಿಸಿ ಮದುವೆಯಾಗುವುದು ಸಾಮಾನ್ಯ. ಹುಡುಗ ಹುಡುಗಿ ಪರಸ್ಪರ ಪ್ರೀತಿಸಿ ಮದುವೆಯಾಗುವುದನ್ನು ಸಮುದಾಯದ ಹಿರಿಯರು ತಕರಾರುಗಳಿಲ್ಲದೆ ಒಪ್ಪಿಕೊಳ್ಳುತ್ತಾರೆ. ಒಂದೇ ಬಳಿಗಳಲ್ಲಿ ಮದುವೆ ನಿಷಿದ್ಧ ಎಂಬುದನ್ನು ಬಿಟ್ಟರೆ, ಹರೆಯದ ಪ್ರೇಮಕ್ಕೆ ಅಪಾರ ಮನ್ನಣೆ ಇರುತ್ತದೆ. ಇದರ ಹೊರತಾಗಿ ಹಿರಿಯರು ನಿರ್ಧರಿಸುವ ಮದುವೆಗಳೂ ಇವರಲ್ಲಿವೆ. ಆದರೆ ಹುಸಿ ಕಟ್ಟಳೆಗಳು ಈ ಸಮುದಾಯದಲ್ಲಿ ಮಾನವೀಯ ಪ್ರೇಮವನ್ನು ಮಾನ್ಯಮಾಡುವಾಗ ಅಡ್ಡ ಬರುವುದಿಲ್ಲ. ಮದುವೆಯಾದ ನಂತರ ದಂಪತಿಗಳು ಅರ್ವಸ್ವತಂತ್ರರೇನಲ್ಲ, ಪ್ರತ್ಯೇಕವಾಗಿ ಬದುಕನ್ನು ಕಟ್ಟಿಕೊಳ್ಳುತ್ತಲೆ ಸಮುದಾಯದ ಲಗಾಯ್ತಿನ ಹೊಣೆಗಾರಿಕೆಗಳನ್ನು ಅವರು ನಿರ್ವಹಿಸಲೇಬೇಕು.

ಬೆಟ್ಟಕುರುಬರಲ್ಲಿ ಒಟ್ಟು 18 ಬಳಿಗಳಿವೆ. ಬಳಿಗಳನ್ನು ಕುಲಗಳು ಎಂದು ಕೂಡ ಕರೆಯಲಾಗುತ್ತದೆ. ಕುಲ ಪದ್ಧತಿ ಬೆಟ್ಟ ಕುರುಬರಲ್ಲಿ ಕಟ್ಟುನಿಟ್ಟಾಗಿದೆ. ತಮ್ಮ ಹೆಸರಿನ ಮುಂದೆ ತಮ್ಮ ಬಳಿ/ಕುಲದ ಹೆಸರನ್ನೂ ಇಟ್ಟುಕೊಳ್ಳುವುದು ವಾಡಿಕೆಯಾಗಿದೆ. ಜೊತೆಗೆ ಸಮುದಾಯದ ಪಾರಂಪರಿಕ ಆಚರಣೆ ಮತ್ತು ವಿಧಿಗಳಲ್ಲಿ ಹಾಡಿಯ ಯಜಮಾನ ಪ್ರಧಾನ ಪಾತ್ರ ವಹಿಸುತ್ತಾನೆ. ಹುಟ್ಟು, ಸಾವು, ಮದುವೆ ಇತ್ಯಾದಿ, ಮಹತ್ವದ ಸಂದರ್ಭಗಳಲ್ಲಿ ಹಾಡಿಯ ಯಜಮಾನನ ಹಾಜರಾತಿ ಕಡ್ಡಾಯವಾಗಿರುತ್ತದೆ. ಇದು ಒಂದು ರೀತಿಯಲ್ಲಿ ಆದಿಮ ಗಣವ್ಯವಸ್ಥೆಯ ಮುಂದುವರಿಕೆಯಂತೆ ಕಾಣುತ್ತದೆ. ಗಣವ್ಯವಸ್ಥೆಯಲ್ಲಿ ಎಲ್ಲರೂ ಸರ್ವ ಸ್ವತಂತ್ರರಾಗಿದ್ದರೂ ಸಹ

ಅಂತಿಮವಾಗಿ ಗಣದ ಸಾಮುದಾಯಿಕವಾಗಿ ಬದ್ಧರುರಾಗಿರುತ್ತಾರೆ. ಇವರು ಮೂಲತಃ ಪ್ರಕೃತಿ ಆರಾಧಕರು ಜೇನುಕುರುಬರಂತೆ ಇಲ್ಲಿಯೂ ಅವರ ಹಿರೀಕರೇ ಇವರಿಗೆ ದೈವಗಳು. ಬುಂಡೆ ಕರೆಯುವ ಪದ್ಧತಿ ಇದೆ. ಇವರು ಆರಾಧಿಸುವ 'ತ್ಯಾಮಕೂಟ' ದೇವರು ಗಂಡು ಹೆಣ್ಣಿನ ಸಮಾಗಮವನ್ನು ಸಂಕೇತಿಸುತ್ತದೆ. ಜೇನುಕುರುಬರ ಕೊಂತಪೂಜೆ, ಇವರ ಆಚರಣೆಗೂ ಅನೇಕ ಸಾಮ್ಯಗಳಿವೆ. ಇದರ ಜೊತೆಗೆ ಬೆಟ್ಟಕುರುಬರು ಮಾದೇಶ್ವರ ದೇವರನ್ನು ಆರಾಧಿಸುತ್ತಾರೆ. ಪ್ರಾಯಶಃ ಮಧ್ಯಕಾಲೀನ ಭಾರತದ ಆಧ್ಯಾತ್ಮ ಮತ್ತು ಸಾಮಾಜಿಕ ಬದುಕಿಗೆ ಹೊಸ ತಿರುವು ಕೊಟ್ಟ ಮಂಟೇಸ್ವಾಮಿ ಮತ್ತು ಮಾದೇಶ್ವರರ ಪ್ರಭಾವಕ್ಕೆ ಇವರು ಒಳಗಾದಂತೆ ಕಂಡು ಬರುತ್ತಾರೆ. ಮಧ್ಯಕಾಲದ ಸಾಮಾಜಿಕ ಸಂದರ್ಭದಲ್ಲಿ ಇವರೂ ಮಾದೇಶ್ವರನ ಒಕ್ಕಲಾಗಿ ಬದಲಾಗಿರುವ ಸಾಧ್ಯತೆಗಳಿವೆ. ಆದರೆ ಬೆಟ್ಟಕುರುಬು ಬೊಮ್ಮದೇವರು, ಮುದ್ದಪ್ಪ, ನೂರಳಯ್ಯ, ಮೂಗಪ್ಪಾಜಿ, ಚಿಕ್ಕದೇವಮ್ಮ, ಊರಮ್ಮ, ಕೂಡಗಿತಾತ ಮುಂತಾದ ಹೆಸರುಗಳ ದೈವಗಳನ್ನು ಪೂಜಿಸುತ್ತಾರೆ. ಈದೈವಗಳ ಮೂಲಕ್ಕೆ ಹೋದರೆ, ಇವರೆಲ್ಲ ಬೆಟ್ಟಕುರುಬರ ಹಿರೀಕರೆ ಆಗಿರುವುದು ಕಂಡು ಬರುತ್ತದೆ. ಪಿತೃಪೂಜೆ ಮತ್ತು ಆತ್ಮಗಳನ್ನು ಆಹ್ವಾನಿಸುವುದು ಆದಿಮ ಆರಾಧನಾ ಪದ್ಧತಿಗಳಾಗಿವೆ. ಇವುಗಳ ಜೊತೆಗೆ ಪಿರಿಯಾಪಟ್ಟಣದಮ್ಮ ದೇವರನ್ನು ಆರಾಧಿಸುತ್ತಾರೆ.

ಪಿತೃಪೂಜೆಯ ಸಂದರ್ಭದಲ್ಲಿ ವಿಶೇಷ ಆಚರಣೆಗಳಿರುತ್ತವೆ. ದೇವರಗುಡ್ಡ ಹಾಡಿ ಮಧ್ಯದ 'ಅಂಬಾಲಕ್ಕೆ' ಬಂದು ಹಿರೀಕರನ್ನು ಆಹ್ವಾನಿಸಿ ಹಾಡಿಯ ಸಮೃದ್ಧಿ, ರೋಗ ರುಜಿನೆ ಇತ್ಯಾದಿ ಆಪತ್ತುಗಳ ಕುರಿತು ಸಂಭಾಷಣೆ ನಡೆಸುತ್ತಾನೆ. ಈ ಸಂದಬ್ಧಲ್ಲಿ ಕೆಲವು ವಿಧಿಗಳು ಕಟ್ಟುನಿಟ್ಟಾಗಿ ನಡೆಯುತ್ತವೆ. ಕುಲದ ಆಚರಣೆಗಳೂ ಸಹ, ಗುಡ್ಡ ತಾನು ಮೈಮೇಲೆ ಆಹ್ವಾನಿಸಿದ ದೈವದ ಹಣತೆಯಂತೆಯೇ ನಡೆಯುತ್ತವೆ. ಕುಲದ ಹಬ್ಬ ನಿರ್ಣಯವಾಗುವುದೂ ಸಹ ಗುಡ್ಡನ ಮೈಮೇಲೆ ಬಂದ ದೈವದ ಹಣತಿಯ ಮೇರೆಗೆ. ಕುಲದ ಹಬ್ಬ ಸಾಮಾನ್ಯವಾಗಿ ಯುಗಾದಿ ಸಂದರ್ಭದಲ್ಲಿ ನಡೆಯುವುದು ವಾಡಿಕೆ.

ಭೂತ ದೈವಗಳ ಕುರಿತು ನಂಬಿಕೆ ಇರುವ ಮತ್ತೆ ಪರಿಹಾರಕ್ಕಾಗಿ ತಮ್ಮ ಹಿರೀಕರನ್ನು ಮೈಮೇಲೆ ಆಹ್ವಾನಿಸಿ ಅವರೂಡನೆ ಸಂಭಾಷಣೆ ನಡೆಸುತ್ತಾರೆ. ದೈವದ ಜೊತೆ ಸಂಭಾಷಣೆ ನಡೆಸಿ ತಮ್ಮ ಪ್ರಶ್ನೆಗಳಿಗೆ ಉತ್ತರ ಪಡೆಯುತ್ತಾರೆ. ಇನ್ನು 'ಬುಂಡೆ ಕರೆಯುವ' ಆಚರಣೆ ಜೇನುಕುರುಬರಲ್ಲಿದ್ದಂತೆ ಬೆಟ್ಟಕುರುಬಲ್ಲಿಯೂ ಇದೆ. ಇವರ ಆಚರಣೆಗಳ ಸಂದರ್ಭದಲ್ಲಿ ಹಾಡು ಕುಣಿತಗಳು ಇದ್ದೇ ಇರುತ್ತವೆ. ಬೆಟ್ಟಕುರುಬರಲ್ಲಿ ಕೋಲಾಟ ಮತ್ತು ಬಿಂಜೆ ಪಾಂಡುವ ಹಾಡುಗಳು ವಿಶೇಷ. ಯಾವುದೇ ಆಚರಣೆಗಳಲ್ಲಿ ಅನ್ಯರ ಪ್ರವೇಶವಿಲ್ಲ. ಹಾಡಿಯ ಯಜಮಾನನೇ ದೇವರಗುಡ್ಡನಾಗಿ ಎಲ್ಲ ವಿಧಿಯಾಚರಣೆಗಳನ್ನು ನಡೆಸಿಕೊಡುತ್ತಾನೆ. ಆದರೆ ದೇವರಗುಡ್ಡ ಪೂಜಾರಿ ಅಲ್ಲ. ದೇವರಗುಡ್ಡ ಅಲೌಕಿಕ ಜಗತ್ತು ಮತ್ತು ಲೌಕಿಕದ ಜಗತ್ತನ್ನು ತನ್ನ ವಿಶೇಷ ಶಕ್ತಿಯಿಂದ ಬೆಸೆಯುವ ಸೇತುವೆ ಮಾತ್ರ. ಇಲ್ಲಿ ಈತ ಪುರೋಹಿತನಂತೆ, ದೈವಗಳ ಮಧ್ಯವರ್ತಿಯಂತೆ ವರ್ತಿಸುವುದಿಲ್ಲ. ಇವರ ಕುರುಬರ ದೈವಗಳು ಮಧ್ಯಂತರ ಜಗತ್ತಿನಿಂದ ಜನಗಳ ಬಳಿಯೇ ಇಳಿದು ಬರುತ್ತವೆ. ಎಲ್ಲದಕ್ಕಿಂತ ಹೆಚ್ಚಿನದಾಗಿ ಇವರಲ್ಲಿ ದೈವಗಳು, ದೇವಾಲಯಗಳ ಮೂರ್ತಿಗಳಲ್ಲೇನು ಇಲ್ಲ. ಹಾಗಾಗಿ ಪುರೋಹಿತನ ಅಗತ್ಯವೂ ಅವರಿಗಿಲ್ಲ. ನೂರಾರು ವರ್ಷಗಳ ಕಾಲ ಕಾಡಿನಲ್ಲಿದ್ದು ಲಘು ಕೃಷಿ, ಕಾಡಿನ ಉತ್ಪನ್ನಗಳ ಮೂಲಕ ಆಹಾರ ಸಂಗ್ರಹಣೆ ಮಾಡಿಕೊಂಡಿದ್ದರು. ವಸಾಹತು ಕಾಲದ ಅರಣ್ಯನೀತಿ ಮತಯ್ತು ಅರಣ್ಯವನ್ನು ಯುರೋಪಿನ ಜನ ವಾಣಿಜ್ಯ ಕೃಷಿಗೆ ಬಳಸಿದ ಕಾರಣಕ್ಕಾಗಿ ಭಾರತದ ಆದಿವಾಸಿಜನರು ತಮ್ಮ ನೆಲೆಗಳನ್ನು ಕಳೆದುಕೊಳ್ಳಬೇಕಾಯಿತು. ಸ್ವಾತಂತ್ರ್ಯಾನಂತರ ಇಲ್ಲಿಯ ಸರಕಾರ ಅನುಸರಿಸಿದ ಅಭಿವೃದ್ಧಿ ನೀತಿಯಿಂದ ಆಳುವ ವರ್ಗದ ಜನ ಉತ್ತಮ ಫಲಗಳನ್ನೇ ಪಡೆದರು. ಆದರೆ ಈ ಅಭಿವೃದ್ಧಿ ನೀತಿಯ ದುಷ್ಪರಿಣಾಮಗಳೆಲ್ಲವನ್ನು ಅನುಭವಿಸಿದವರು ಮಾತ್ರ ದುಡಿವ ವರ್ಗದ ಜನರು. ತಮ್ಮ ಕಾಡಿನ ಸ್ವಚ್ಛಂದ ಬದುಕನ್ನು ಕಳೆದುಕೊಂಡಿದ್ದು ವಸಾಹತುಶಾಹಿ ಪ್ರಣೀತ ಅರಣ್ಯ ನೀತಿಯಿಂದ ಮತ್ತು ಬೃಹತ್ ಅಣೆಕಟ್ಟೆಗಳ ಮೂಲಕವೆ ಅಭಿವೃದ್ಧಿ ಸಾಧ್ಯ ಎಂಬ ಅಪನಂಬಿಕೆಯಿಂದ ಇವರು ಸ್ಥಳೀಯವಾಗಿ ನಿರ್ಮಾಣಗೊಂಡ ಅಣೆಕಟ್ಟುಗಳಿಂದ ತಮ್ಮ ವಾಸದ ನೆಲೆಗಳನ್ನು ಕಳೆದುಕೊಂಡರು. ರಾಷ್ಟ್ರೀಯ ಉದ್ಯಾನ ಮತ್ತು ವನ್ಯಜೀವಿ ರಕ್ಷಣಾ ಕಾಯ್ದೆಯಿಂದ ಕಾಡಿನಿಂದ ಇವರನ್ನು ಒಕ್ಕಲೆಬ್ಬಿಸಲಾಯಿತು. ಬೆಟ್ಟಕುರುಬರು ತಮ್ಮ ಶತಮಾನಗಳ ವಾಸದ ಸ್ಥಳ ಮತ್ತು ಪಾರಂಪರಿಕ ಕಸುಬುಗಳನ್ನೇ ಕಳೆದುಕೊಂಡು ತೀವ್ರತರ ಅನ್ಯತೆಯನ್ನು ಅನುಭವಿಸುತ್ತಿದ್ದಾರೆ. ಮೈಸೂರು ಮತ್ತು ಕೊಡಗಿನ ಭಾಗದಲ್ಲಿ ಕೆಲವು ಸ್ವಯಂಸೇವಾ ಸಂಸ್ಥೆಗಳು ಮತ್ತು ಹಲವು ಸಂಘಟನೆಗಳು ಇವರನ್ನು ಸಂಘಟಿಸಿ ಹಲವು ಹೋರಾಟಗಳನ್ನು ಕೈಗೊಂಡು ಇವರ ಕಲ್ಯಾಣಕ್ಕೆ ಪ್ರಯತ್ನಿಸಿವೆ. ಆದರೆ ಇವರ ಸಮಸ್ಯೆಗಳು ಇನ್ನು ಜೀವಂತವಾಗಿವೆ. ಇಂದಿಗೂ ಅಪೌಷ್ಠಿಕತೆಯಿಂದ ನರಳುತ್ತಿದ್ದಾರೆ ಇವರ ಜನಸಂಖ್ಯೆಯಲ್ಲಿ ಸಹಜ ಏರುಗತಿ ಕಾಣುತ್ತಿಲ್ಲ. ರಕ್ತಹೀನತೆ ಮತ್ತು ಹುಟ್ಟಿದ ಮಕ್ಕಳ ಸಾವಿನ ಪ್ರಮಾಣ ಅಧಿಕವಾಗಿದೆ. ಜೇನುಕರುಬರಂತೆ ಬೆಟ್ಟಕುರುಬರೂ ಸಹ ಆದಿಮ ಬುಡಕಟ್ಟಾಗಿದ್ದು ಇವರನ್ನು 'ಆದಿಮ ಬುಡಕಟ್ಟು' ಎಂದು ಘೋಷಿಸುವ ಅಗತ್ಯವಿದೆ. ಇದರ

ಜೊತೆಗೆ ಒಳ ಮೀಸಲಾತಿ ಹರಣ ದಿನನಿತ್ಯ ನಡೆಯುತ್ತದೆ. ಮೈಸೂರು, ಚಮರಾಜನಗರ ಮತ್ತು ಕೊಡಗು ಜಿಲ್ಲೆಗಳ ಹೆಚ್ಚಾಗಿ ಕಂಡು ಬರುತ್ತಾರೆ. ಜಾಗತೀಕರಣದಿಂದ ಮೀಸಲಾತಿಯ ಅವಕಾಶಗಳೇ ಕುಗ್ಗಿ ಹೋಗುತ್ತಿದೆ.

**ವಿವಾಹ ಪದ್ಧತಿ**

ಬೆಟ್ಟಕುರುಬರ ಮದುವೆ ಸಂಬಂಧ ಅನುಸರಿಸುವ ಕ್ರಿಯಾವಿಧಿಗಳು ಇತರ ಸಮುದಾಯಕ್ಕಿಂತ ಭಿನ್ನವಾಗಿದೆ. ಸೋದರತ್ತೆ, ಸೋದರಮಾವನ ಮಗ/ಮಗಳ ಮಧ್ಯೆ ಮದುವೆ ನಡೆಯುತ್ತದೆ. ಹೊರಗಿನ ಹಾಡಿಗಳಿಂದಲೂ ಹೊಸ ನೆಂಟತನ ಕುದುರಿಸುತ್ತಾರೆ. ಬೊಮ್ಮನ್-ಬೊಮ್ಮಿ, ಕ್ಯಾತ-ಕೇತಿ, ಮಾರನ್- ಮಾರಿ, ಮಾಯಿಡಾಲನ್, ಬಡ್ಡಿ ಕಲಕ್ಕನ್, ಬೈಟಕ್, ಕಿನ್ನ್ಯಾದಿ, ಇನ್ನು ಮುಂತಾದವು ಗಂಡಸರು ಮತ್ತು ಹೆಂಗಸರ ಹೆಸರುಗಳಾಗಿವೆ. ವಿಳ್ಯೇದೆಲೆ ಅಡಿಕೆ ವಿನಿಮಯ ಮಾಡಿಕೊಳ್ಳುವುದು, ಉಡುಗೆ ಹಾಗೂ ಗಾಜಿನ ಮಣಿಸರ ನೀಡುವುದು. ಹಾಡಿಯ ಯಜಮಾನನ ಸಮ್ಮುಖದಲ್ಲಿ ಮದುವೆ ಮಾಡುವುದು ಈಗಿನ ಸಂಪ್ರದಾಯವಾಗಿದೆ. ಮದುವೆ ಮತ್ತು ಪ್ರಸ್ಥ ಗಂಡಿನ ಮನೆಯಲ್ಲಿ ನಡೆಯುತ್ತದೆ. ಹಾಡಿಯ ಎಲ್ಲ ಮನಗಳವರೆಗೂ ವೀಳ್ಯ ನೀಡಿ ಆಮಂತ್ರಿಸಲಾಗುತ್ತದೆ. ಹೆಣ್ಣಿನ ತಾಯಿ ಮಗಳಿಗೆ ತಾಳಿಯನ್ನು ಮತ್ತು ಗಂಡಿಗೆ ಹೊಸ ಉಡುಪನ್ನು ನೀಡುತ್ತಾಳೆ. ಗಂಡಿನ ತಂದೆ ತಾಯಿಗಳು ಹೆಣ್ಣಿಗೆ ಹೊಸ ಉಡುಪುನ್ನು ಹಾಗೂ ಹಿತ್ತಾಳೆಯ ಆಭರಣಗಳನ್ನು ನೀಡಿರುತ್ತಾರೆ. ಹಿಂದೆ ಕರಿಮಣಿಸರವೇ ತಾಳಿಯಾಗಿತ್ತು. ಇತ್ತೀಚಿನ ದಿನಗಳಲ್ಲಿ ಚಿನ್ನ. ಬೆಳ್ಳಿಯ ತಾಳಿಗಳು ಬಳಕೆಯಲ್ಲಿವೆ. ಬೆಟ್ಟಕುರುಬರ ಪಾರಂಪರಿಕ ವಾದ್ಯ ಮೇಳದೊಂದಿಗೆ ಚಪ್ಪರದಡಿಯಲ್ಲಿ ಮದುವೆ ನಡೆಯುತ್ತದೆ. ಮಾಂಸದ ಊಟದೊಂದಿಗೆ ಸಾಮೂಹಿಕ ಕುಣಿತಗಳೊಂದಿಗೆ ಮದುವೆ ಸಾಂಗವಾಗುತ್ತದೆ. ಮೊದಲ ಹೆರಿಗೆ ಹೆಣ್ಣಿನ ತವರುಮನೆಯ ಅದಕ್ಕೆಂದೆ ಮನೆಯ ಹೊರಗೆ ಕಟ್ಟಿರುವ ಪ್ರತ್ಯೇಕ ಗುಡಿಸಲಿನಲ್ಲಿ ನಡೆಯುತ್ತದೆ. ಏಳು ದಿನ ಹೆತ್ತ ಸೂತಕ ಅನುಸರಿಸುತ್ತಾರೆ. ಅನಂತರ ಮೂರರಿಂದ ಐದು ತಿಂಗಳವರೆಗೆ ತಾಯಿ ಮಗು ಹಲವು ಕಟ್ಟುಪಾಡುಗಳನ್ನು ಅನುಸರಿಸಬೇಕಾಗುತ್ತದೆ. ಮಗು ಹುಟ್ಟಿದ 21ನೇ ದಿನ ಅಥವಾ 3 ತಿಂಗಳೊಳಗೆ ನಾಮಕರಣ ಮಾಡಲಾಗುತ್ತದೆ. ಗಂಡು ಮತ್ತು ಹೆಣ್ಣು ಮಕ್ಕಳಿಗೆ ತಲೆಕೂದಲು ತೆಗೆಯುವ ಶಾಸ್ತ್ರವು ಮನೆದೇವರ ಹೆಸರಿನಲ್ಲಿ ನಡೆಯುತ್ತದೆ. ಹೆಣ್ಣು ಋತುಮತಿಯಾದಗ ಹೊಸದಾಗಿ ನಿರ್ಮಿಸಿದ ಸೂತಕದ ಗುಡಿಸಲಿನಲ್ಲಿ ಇರಬೇಕಾಗುತ್ತದೆ. 9ನೇ ದಿನಕ್ಕೇ ಆಕೆಗೆ ನೀರೆರೆದು ಹೊಸ ಉಡುಪು ನೀಡಿ ಮನೆಗೆ ಸೇರಿಸಿಕೊಳ್ಳುತ್ತಾರೆ. ಹಾಡಿಯ ಯಜಮಾನ ಎಲ್ಲರ ಗೌರವಕ್ಕೆ ಪಾತ್ರನಾದ ವ್ಯಕ್ತಿ ಆತನ ಮಾತುಗಳನ್ನು ಎಲ್ಲರೂ ಪಾಲಿಸಬೇಕು. ಸಮುದಾಯದ ಬುಡಕಟ್ಟು ರೂಢಿಗಳನ್ನು ಎಲ್ಲರೂ ಪಾಲಿಸಬೇಕು. ಯಾರಾದರು ನಿಯಮಗಳನ್ನು ಮೀರಿದರೆ ಊರಿನ ಹಿರಿಯರು ಹಾಗೂ ಯಜಮಾನರು ಸಮಾಲೋಚಿಸಿ ನ್ಯಾಯ ನಿರ್ಣಯ ಕೈಗೊಳ್ಳುತ್ತಾರೆ. ಆಗಲೂ ನ್ಯಾಯ ಇತ್ಯರ್ಥವಾಗದ ಪರಿಸ್ಥಿತಿ ಉಂಟಾದರೆ ಅರಣ್ಯ ಇಲಾಖೆ ಅಧಿಕಾರಿಯ ಸಲಹೆ ಕೇಳುತ್ತಾರೆ. ಗಂಡ ಹೆಂಡತಿ ಮಧ್ಯೆ ಭಿನ್ನಾಬಿಪ್ರಾಯ ತಲೆದೋರಿದರೆ ಒಟ್ಟಾಗಿ ಬಾಳುವುದು ಸಾಧ್ಯವಿಲ್ಲವಾದಾಗ ವಿಚ್ಛೇದನ ಪಡೆದುಕೊಳ್ಳಬಹುದು. ಬೆಟ್ಟಕುರುಬರ ಹಿರಿಯರ ಪಂಚಾಯಿತಿಯಲ್ಲಿ ಅದರ ಇತ್ಯರ್ಥ ವಾಗುತ್ತದೆ. ಯಜಮಾನನ್ನು ಮೂಪೋಲ್ಡ್ ಎನ್ನುತ್ತಾರೆ. ಗಂಡ ಹೆಂಡತಿಗೆ ಬುದ್ಧಿ ಮಾತು ಹೇಳಿ ಅವರು ಒಟ್ಟಾಗಿ ಬಾಳುವಂತೆ ಮಾಡಲು ಸಲಹೆ ನೀಡುತ್ತಾರೆ. ಹೀಗೆ 2-3 ಸಲ ಪಂಚಾಯಿತಿ ಸೇರಿ ಅವರಿಗೆ ಆಪ್ತ ಸಲಹೆ ನೀಡುಲಾಗುತ್ತದೆ. ಆದರೂ ಇವರಿಬ್ಬರ ನಿಲುವು ಬದಲಾಗದಿದ್ದಲ್ಲಿ ವಿಚ್ಛೇಧನಕ್ಕೆ ಅನುಮತಿ ದೊರಕುತ್ತದೆ. ದಂಪತಿಗಳಿಗೆ ಮಕ್ಕಳಿದ್ದರೆ ತಂದೆಯ ಪಾಲನೆಗೆ ಒಳಪಡುತ್ತವೆ. ಮಕ್ಕಳನ್ನು ಆಗಾಗ ಭೇಟಿ ಮಾಡುವ ಪ್ರೀತಿ ತೋರುವ ಹಕ್ಕು ತಾಯಿಗಿರುತ್ತದೆ. ವಿಚ್ಛೇದಿತರು ಬೇರೆ ಮದುವೆ ಮಾಡಿಕೊಳ್ಳಲು ಯಾವ ಅಡ್ಡಿಯೂ ಇರುವುದಿಲ್ಲ. ಬೆಟ್ಟ ಕುರುಬರು ಬೆಳ್ಳಿ ಮಾರಮ್ಮ, ಬಿಸಲದಮ್ಮ ಮೂಗಪ್ಪಾಜಿ, ಬೊಮ್ಮ ದೇವರು ಮತ್ತು ಮಾದಪ್ಪ ಮುಂತಾದ ದೇವರು ಗಳನ್ನು ಪೂಜಿಸುತ್ತಾರೆ. ಯುಗಾದಿ ಹಬ್ಬ, ತಿರು ಓಣಂ ಹಬ್ಬ ಹಾಗೂ ಮಾದಪ್ಪನ ಹೆಸರಿನಲ್ಲಿ ಶಿವರಾತ್ರಿ ಹಬ್ಬವನ್ನು ಆಚರಿಸುತ್ತಾರೆ. ಪ್ರತಿ ವರ್ಷ ಮಾರ್ಚ್-16 ರಿಂದ ಏಪ್ರಿಲ್-16 ರವರೆಗೆ ನಡೆಯುವ 'ಬಾಕು-ಬಳವು' ಉತ್ಸವ ಬೆಟ್ಟಕುರುಬರು ಆಚರಿಸುವ ವಿಶೇಷ ಹಬ್ಬ ಇದರಲ್ಲಿ ವೈನಾಡಾನ್ ಚೆಟ್ಟಿ ಸಮುದಾಯವೂ ಭಾಗವಹಿಸುತ್ತದೆ. ಈ ಹಬ್ಬದ ಸಂದರ್ಭದಲ್ಲಿ ಪ್ರತಿದಿನ ಸಂಜೆ ಹಾಡಿಯ ಪಂಚಾಯಿತಿ ಕಟ್ಟೆಯ ಬಳಿ ಮೋಳ(ಚಂಡೆ ಮದ್ದಳೆ) ಬಾರಿಸಲಾಗುತ್ತದೆ. ಹಾಡಿಯ ಎಲ್ಲರೂ ನೆರೆದು ಒಂದು ಕಡೆ ಚಂಡೆವಾದನ, ಮತ್ತೊಂದು ಕಡೆ ಹಾಡು ಕುಣಿತಗಳ ಸೇವೆ ನಡೆಯುತ್ತದೆ. ಈ ಸಂದರ್ಭದಲ್ಲಿ ಸ್ವಾಮಿ ಯಾಡುವ (ಅಂದರೆ ಮನುಷ್ಯನ ಮೇಲೆ) ದೇವರ ಗುಡ್ಡನ ಮೇಲೆ ದೇವರು ಬರುತ್ತದೆ. ಹಾಡಿಯವರೆಲ್ಲ ಸೇರಿ ಮಾಡಿರುವ ಸೇವೆಯಿಂದ ದೇವರಿಗೆ ಸಂತೃಪ್ತಿಯಾಗಿದೆ. ಎಲ್ಲರಿಗೂ ಒಳ್ಳೆಯದಾಗುತ್ತದೆ. ಎಂದು ಗುಡ್ಡನ ಬಾಯಿಯಿಂದ ಮಾತುಗಳು ಹೊರಡುತ್ತವೆ. ಎದರಿಂದ ಎಲ್ಲಾ ಹಾಡಿಯ ಜನರಲ್ಲಿ ಸಂತೋಷ ಹಾಗೂ ನಂಬಿಕೆ ಬರುತ್ತದೆ. ಬೆಟ್ಟ ಕುರುಬರಲ್ಲಿ ಭೂಮಿಯ ಮತ್ತು ಜೀವಿಗಳ ಕುರಿತ ಕಥೆಯೊಂದಿದೆ. ಮೊದಲು ಭೂಮಿಯ ಮೇಲೆ ಬರೀ ನೀರೇ ನೀರು. ಯಾವ ಜೀವಿಗಳು ಉಗಮವಾಗಿರಲಿಲ್ಲ ನೀರಿನ ಮಟ್ಟ ಇಳಿಯುತ್ತಿದ್ದಂತೆ ಭೂಮಿಯ ಮೇಲೆ ಇಬ್ಬರು ಅಣ್ಣ ತಂಗಿಯರು ಹುಟ್ಟಿ ಬಂದರು. ಜೊತೆಗೆ ಹುಟ್ಟಿದವರಾಗಿದ್ದ

ಕಾರಣ ಅವರು ಅಣ್ಣ ತಂಗಿಯರೆಂದೇ ಭಾವಿಸಿ ಜೊತೆಗಿದ್ದರು. ಸಂತಾನೋತ್ಪತ್ತಿಯಾಗದೆ ಮಾನವ ಪೀಳಿಗೆಯ ಮುಂದುವರಿಕೆ ಸಾಧ್ಯವಾಗಲಿಲ್ಲ. ಆಗ ಶಿವ ಅಣ್ಣ ತಂಗಿಯನ್ನು ವಿರುದ್ಧ ದಿಕ್ಕಿನಲ್ಲಿ ಅಭಿಮುಖವಾಗಿ ನಿಲ್ಲಿಸಿದರು. ನಂತರ ಪರಸ್ಪರ ಮುಖ ನೋಡಿಕೊಂಡಾಗ ಇಬ್ಬರೂ ಗಂಡ ಹೆಂಡತಿಯರಾಗಿ ಭಾವಿಸಿಕೊಂಡರು. ಇವರ ಮಕ್ಕಳನ್ನು ಕಾಡುಕುರುಬ, ಜೇನುಕುರುಬ ಬುಡಕಟ್ಟುಗಳೆಂದು ಗುರುತಿಸಲಾಯಿತು. ಜೇನುಕುರುಬರು ತಮ್ಮನ ಮಕ್ಕಳಾದರೆ, ಬೆಟ್ಟಕುರುಬರು ಅಣ್ಣನ ಮಕ್ಕಳಾದರು, ಎಲ್ಲರೂ ಕಾಡಿನಲ್ಲಿಯೇ ಜೀವಿಸತೊಡಗಿದರು ಜೇನುಕುರುಬರು ಜೇನನ್ನು ಅರಸುತ್ತಾ ಹೋದರೆ, ಬೆಟ್ಟಕುರುಬರು ಬಿದಿರಿನ ವೃತ್ತಿಯನ್ನು ಅವಲಂಬಿಸಿ ಬದುಕತೊಡಗಿದರು. ಈ ಕಾರಣದಿಂದ ಜೇನುಕುರುಬ ಮತ್ತು ಬೆಟ್ಟಕುರುಬರು ಒಂದೇ ತಾಯಿಯ ಮಕ್ಕಳಾದರು. ಆಯ್ಕೆ ಮಾಡಿಕೊಂಡ ವೃತ್ತಿಯಿಂದಾಗಿ ಇವರು ಬೇರೆ ಬೇರೆ ಸಮುದಾಯಗಳಾಗಿ ರೂಪುಗೊಂಡರು ಇದು ಅವರ ಸೃಷ್ಟಿಯ ಕುರಿತ ಕಥೆ. ಈ ಸೃಷ್ಟಿ ಪುರಾಣದ ಆಶಯದಂತೆಯೇ ಬೆಟ್ಟಕುರುಬ ಮತ್ತು ಜೇನುಕುರುಬರಲ್ಲಿ ಹಲವು ಅಂಶಗಳಲ್ಲಿ ಸಾಮ್ಯತೆಗಳಿವೆ. ಜೊತೆಗೆ ಸಮುದಾಯಗಳು ಒಂದೇ ಪರಿಸರದಲ್ಲಿ ಬದುಕುತ್ತಿದ್ದು ಮುಖಚಹರೆ, ಆಚರಣೆ ಮತ್ತು ಆಧ್ಯಾತ್ಮಿಕ ವಿಷಯಗಳಲ್ಲಿ ಇಬ್ಬರಿಗೂ ಸಾಮ್ಯತೆಗಳಿವೆ.

**ಉಪಸಂಹಾರ**

ಒಟ್ಟಾರೆಯಾಗಿ ಬೆಟ್ಟಕುರುಬರು ಬೆಟ್ಟದ ತಪ್ಪಲಿನ ಪ್ರದೇಶಗಳಲ್ಲಿ ಹೆಚ್ಚಾಗಿ ವಾಸಿಸಿತ್ತಾರೆ. ಜೇನುಕುರುಬರಂತೆ ಬೆಟ್ಟಕುರುಬರೂ ಸಹ ದಟ್ಟ ಕಾಡಿನಲ್ಲಿ ವಾಸಿಸಿತ್ತಿದ್ದವರು ಆದರೆ ವಿವಿಧ ಕಾರಣಗಳಿಂದ ನೆಲೆ ಕಳೆದುಕೊಂಡ ಬೆಟ್ಟಕುರುಬರು ಕಾಡಂಚಿಗೆ ತಳ್ಳಲ್ಪಟ್ಟರು. ತಮ್ಮ ಶತಮಾನಗಳ ಕಾಲದ ವಾಸಸ್ಥಳಗಳಿಂದ ದೂರವಾದ ನಂತರವೂ ಬೆಟ್ಟಕುರುಬರ ಕಾಡಿನ ನಡುವಿನ ಸಂಬಂಧ ಹಾಗೇಯೇ ಉಳಿದು ಬಂದಿದೆ.

**ಪರಾಮರ್ಶನ ಗ್ರಂಥಗಳು**


- ಕೃಷ್ಣ ಅಯ್ಯಂಗಾರ್. ಡಿ. (1956). *ಕನ್ನಡ ನಾಡಿನ ಆದಿವಾಸಿಗಳು (ಮೈಸೂರು ರಾಜ್ಯ).* ವಾರ್ತೆ ಇಲಾಖೆ. ಪು.497.
- ಮಧು ಗುಂಡ್ಲುಪೇಟೆ. (2002). *ಕರ್ನಾಟಕ ಬುಡಕಟ್ಟು ಜನಾಂಗಗಳ ಅಭಿವೃದ್ಧಿ.* ಅಕ್ಷತಾ ಪ್ರಕಾಶನ.
- ಮಂಜುನಾಥ. ಬಿ.ಆರ್. (2014). *ಬುಡಕಟ್ಟು ಮಕ್ಕಳ ಶೈಕ್ಷಣಿಕ ಸ್ಥಿತಿಗತಿಗಳು: ಒಂದು ಮಾನವಶಾಸ್ತ್ರೀಯ ಅಧ್ಯಯನ.* ಅಪ್ರಕಟಿತ ಪ್ರೌಢಪ್ರಬಂಧ, ಮೈಸೂರು.ವಿ.ವಿ.
- ಮಂಜುನಾಥ ಬಿ.ಆರ್. ಮತ್ತು ಲೋಕೇಶ್ ಎಂ. (2019). *ಬೆಟ್ಟಕುರುಬ ಸಮುದಾಯದ ಸಾಂಸ್ಕೃತಿಕ ಆಚರಣೆಗಳು.* ಪ್ರತಿಬಿಂಬ:ಮಲ್ಟಿಡಿಸಿಪ್ಲಿನರಿ ರೀಸರ್ಚ್ ಅಂಡ್ ಡೆವಲಪ್‌ಮೆಂಟ್ ಆಫ್ ಐಐಎಂಆರ್‌ಡಿ, ಸಂ.1 (3). ಪು. 10–14
- ನಂಜುಂಡಯ್ಯ. (2005). *ಬೆಟ್ಟಕುರುಬರು.* ಇಲ್ಲಿ ಪಾರ್ವತಮ್ಮ, ಸಿ. ಮತ್ತು ರಾಜೇಗೌಡ (ಸಂ). ಆದಿವಾಸಿ ಸಮುದಾಯಗಳ ಬದುಕು ಬವಣೆ, ಗ್ರಾಮೀಣ ಮತ್ತು ಆದಿವಾಸಿ ಅಭಿವೃದ್ಧಿ ಸಂಶೋಧನಾ ಕೇಂದ್ರ. ಮೈಸೂರು–02. ಪು. 66–77.
- Najundaih. H.V and Anathkrishna Iyer. (1930). The Mysore Tribes and Castes (Vol. IV). The Mysore University press, Mysore.


**ವಕ್ತೃಗಳ ವಿವರ:**

- ಬೋಮ್ಮಜ್ಜ, ವಯಸ್ಸು–67 ವರ್ಷ, ಬಸವನಗಿರಿ ಎ ಹಾಡಿ, ಹೆಚ್.ಡಿ. ಕೋಟೆ.
- ದ್ಯಾವಮ್ಮ, ವಯಸ್ಸು–58 ವರ್ಷ, ಬಸವನಗಿರಿ ಬಿ ಹಾಡಿ, ಹೆಚ್.ಡಿ. ಕೋಟೆ.
- ಬಸವರಾಜು–46 ವರ್ಷ, ಅಣ್ಣೂರು ಹಾಡಿ, ಹುಣಸೂರು ರಸ್ತೆ, ಹೆಚ್.ಡಿ. ಕೋಟೆ.